www.kannadaprabha.com
ಬೆಂಗಳೂರು
ಬೆಳಗಾವಿ
ಶಿವಮೊಗ್ಗ
ಮಂಗಳೂರು
ಹುಬ್ಬಳ್ಳಿ
ಗುಲ್ಬರ್ಗ

ಇಂದಿನ ಸಂಚಿಕೆ ಜತೆಗೆ 4 ಪುಟಗಳ ಭವಿಷ್ಯ, ಕಾಲೇಜುರಂಗ, ಕ್ರೀಡಾಪ್ರಭ ಪುರವಣಿ ಇದೆ

ಕನ್ನಡಪ್ರಭ

ಬೆಂಗಳೂರು
2 ಮಾರ್ಚ್ 2010
ಮಂಗಳವಾರ
16 ಪುಟ, ರು. 3–00
Late City

ಅಂಬಿ– ಸುದೀಪ್ ನಾರಾಯಣ ನಾರಾಯಣ...
➤ ಪುಟ 10

ಬೀದಿ ಕಾಮಣ್ಣರ ಮೇಲೆ ಎಸ್ಸೆಮ್ಮೆಸ್ ಬಾಣ

● ಪಡ್ಡೆಗಳ ನಿಯಂತ್ರಣಕ್ಕೆ ಕೇರಳ ಮಹಿಳಾಮಣಿಗಳ ತಂತ್ರ ➤ ಪುಟ 7

ತರೂರ್ ತರ್ಲೆ ವಿರುದ್ಧ ಈಗ ಕಾಂಗ್ರೆಸ್ಸಿಗರಿಂದಲೇ ಆಕ್ಷೇಪ
➤ ಪುಟ 7

▮ ಉಡುಪಿ ಜಿಲ್ಲೆಯಲ್ಲಿ 3ನೇ ಎನ್‌ಕೌಂಟರ್ ▮

ಅಂಡಾರಲ್ಲಿ ನಕ್ಸಲ್ ವಸಂತಗೌಡ ಹತ್ಯೆ

▮ 2 ನಕ್ಸಲರು ಪರಾರಿ, ಪೊಲೀಸ್‌ಗೆ ಗಾಯ

ಎನ್‌ಕೌಂಟರಲ್ಲಿ ಬಲಿಯಾದ ನಕ್ಸಲ್ ವಸಂತ.

ಕನ್ನಡಪ್ರಭವಾರ್ತೆ, ಉಡುಪಿ, ಮಾ.1
ಪಶ್ಚಿಮಘಟ್ಟದ ಕಾಡು ಮತ್ತೆ ರಕ್ತಸಿಕ್ತವಾಗಿದೆ. ನಕ್ಸಲ್ ನಿಗ್ರಹ ಪಡೆ ಪೊಲೀಸರು ಸೋಮವಾರ ಸಂಜೆ 4.30ರ ವೇಳೆಗೆ ಕಾರ್ಕಳ ತಾಲೂಕು ಅಂಡಾರು ಗ್ರಾಮದಲ್ಲಿ ನಕ್ಸಲ್ ಯುವಕನೊಬ್ಬನನ್ನು ಹೊಡೆದುರುಳಿಸಿದ್ದು, ಈತನ ಸಹಚರರಿಬ್ಬರು ಸ್ಥಳದಿಂದ ತಪ್ಪಿಸಿಕೊಂಡಿದ್ದಾರೆ. ಮೃತ ನಕ್ಸಲೀಯನನ್ನು ದ.ಕ. ಜಿಲ್ಲೆ ಬೆಳ್ತಂಗಡಿ ಕುತ್ಲೂರು ನಿವಾಸಿ ವಸಂತ ಗೌಡ ಯಾನೆ ಆನಂದ (25) ಎಂದು ಗುರುತಿಸಲಾಗಿದೆ. ➤ 4 ನೇ ಪುಟಕ್ಕೆ

ಕುತ್ಲೂರಿನ ವಸಂತ ಸಕ್ರಿಯ ನಕ್ಸಲ್

ಬೆಳ್ತಂಗಡಿ: ಮುಟ್ಲುಪಾಡಿಯಲ್ಲಿ ಪೊಲೀಸ್ ಗುಂಡಿಗೆ ಬಲಿಯಾದ ವಸಂತ ಗೌಡ (25) ನಾರಾವಿ ಪಂಚಾಯತ್‌ನ ಕುತ್ಲೂರು ಗ್ರಾಮದ ಕೋಟಂದಡ್ಕದ ನಿವಾಸಿ. ಈತನ ತಂದೆ ಬಾಬು ಮಲೆಕುಡಿಯ. ➤ 4 ನೇ ಪುಟಕ್ಕೆ

30 ಡೆಡ್‌ಲೈನ್

▮ ನಿಗದಿತ ವೇಳೆಗೆ ಬಿಬಿಎಂಪಿ ಚುನಾವಣೆ: ಹೈಕೋರ್ಟ್ ತಾಕೀತು

▮ ಶುಕ್ರವಾರ ಸಂಜೆ ಹೊರಬೀಳಲಿದೆ ಚುನಾವಣೆ ವೇಳಾಪಟ್ಟಿ

ಕನ್ನಡಪ್ರಭ ವಾರ್ತೆ, ಬೆಂಗಳೂರು, ಮಾ.1
ಕಳೆದ ಮೂರೂವರೆ ವರ್ಷದಿಂದ ಒಂದಲ್ಲಾ ಒಂದು ಕಾರಣದಿಂದ ಮುಂದೂಡುತ್ತಾ ಬಂದಿರುವ ಬಿಬಿಎಂಪಿ ಚುನಾವಣೆಯನ್ನು ಮಾ. 30ರೊಳಗೆ ನಡೆಸಲೇ ಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಬಂದಿದೆ.



ಬಿಬಿಎಂಪಿ ಚುನಾವಣೆಗೆ ಮೇ 15ರವರೆಗೆ ಕಾಲಾವಕಾಶ ಕೋರಿ ಸರ್ಕಾರ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ತಳ್ಳಿ ಹಾಕಿರುವ ಹೈಕೋರ್ಟ್, ಪದೇ ಪದೇ ಚುನಾವಣೆ ಮುಂದೂಡುವ ಸರ್ಕಾರದ ಕ್ರಮವನ್ನು ಕಟು ಮಾತುಗಳಿಂದ ತರಾಟೆಗೆ ತೆಗೆದುಕೊಂಡಿದೆ. ಕುಂಟು ನೆಪ ಹೇಳುವುದನ್ನು ಬಿಟ್ಟು ನಿಗದಿತ ಅವಧಿಯೊಳಗೆ ಚುನಾವಣೆ ನಡೆಸುವಂತೆ ಸ್ಪಷ್ಟ ಆದೇಶ ನೀಡಿದೆ.

ಜತೆಗೆ ಯಾವ ಕಾರಣಕ್ಕೂ ಚುನಾವಣೆ ಮಾ. 30ಕ್ಕಿಂತ ವಿಳಂಬ ಆಗಬಾರದು ಎಂದು ಮತ್ತೊಮ್ಮೆ ಸರ್ಕಾರಕ್ಕೆ ಕೋರ್ಟ್ ನಿರ್ದೇಶನ ನೀಡಿದೆ. ಇದಕ್ಕೆ ಅನುಕೂಲವಾಗುವಂತೆ ಇನ್ನು ಎರಡು ದಿನಗಳ ಒಳಗಾಗಿ (ಬುಧವಾರ ಸಂಜೆಯೊಳಗೆ) ಮೀಸಲಾತಿ ಅಂತಿಮ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಬೇಕು ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಪಟ್ಟಿ ಕೈಸೇರಿದ ಎರಡು ದಿನಗಳಲ್ಲಿ (ಶುಕ್ರವಾರ ಸಂಜೆಯೊಳಗೆ) ಚುನಾವಣಾ ವೇಳಾಪಟ್ಟಿ ಪ್ರಕಟಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶಿಸಿದೆ.

ಬಿಬಿಎಂಪಿ ಚುನಾವಣೆ ನಡೆಸಲು ಮೇ 15ರವರೆಗೆ ಕಾಲಾವಕಾಶ ನೀಡುವಂತೆ ಕೋರಿ ಸರ್ಕಾರ ಸಲ್ಲಿಸಿದ್ದ ಮಧ್ಯಂತರ ಕೋರಿಕೆಯನ್ನು ತಿರಸ್ಕರಿಸಿದ ನ್ಯಾ। ವಿ.ಗೋಪಾಲಗೌಡ ಮತ್ತು ನ್ಯಾ। ಬಿ.ಎಸ್.ಪಾಟೀಲ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದ್ದು, ನಿಗದಿತ ಅವಧಿಯೊಳಗೆ ಚುನಾವಣೆ ನಡೆಸದಿದ್ದರೆ ಅದರ ಪರಿಣಾಮ ಎದುರಿಸಬೇಕಾದೀತು ಎಂದು ಎಚ್ಚರಿಕೆ ನೀಡಿದೆ. ➤ 3 ನೇ ಪುಟ ನೋಡಿ

ಕುಟುಕಿದ ಕೋರ್ಟ್

▮ ಕುಂಟುನೆಪ ಬಿಟ್ಟುಬಿಡಿ, ಚುನಾವಣೆ ನಡೆಸಿ

▮ ಪ್ರಜಾಪ್ರಭುತ್ವ ರಕ್ಷಿಸಬೇಕಾದ ಸರ್ಕಾರವೇ ಈ ರೀತಿ ಮಾಡುವುದು ನೋವಿನ ಸಂಗತಿ

ಬಜೆಟಲ್ಲಿ ನಗರಕ್ಕೆ ಭರ್ಜರಿ ಕೊಡುಗೆ?

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಈ ಬಾರಿ ಬೆಂಗಳೂರಿಗೆ ಭರಪೂರ ಹಣವನ್ನೇ ಒದಗಿಸುವ ಸಾಧ್ಯತೆ ಇದೆ.

ಹೈಕೋರ್ಟ್ ಆದೇಶದಂತೆ ಬಿಬಿಎಂಪಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಶುಕ್ರವಾರ ಸಂಜೆಯವರೆಗೆ ಕಾಲಾವಕಾಶವಿದೆ. ಆದರೆ, ಶುಕ್ರವಾರ ಬೆಳಗ್ಗೆ ಬಜೆಟ್ ಮಂಡನೆಯಾಗಲಿರುವುದರಿಂದ ಬಿಬಿಎಂಪಿಗೆ 'ಕೊಡುಗೆ' ನೀಡಲು ಸರ್ಕಾರಕ್ಕೆ ಅಡ್ಡಿ ಇಲ್ಲ. ➤ 3 ನೇ ಪುಟಕ್ಕೆ

ವಿಷಾದ

'ಸಾಪ್ತಾಹಿಕ ಪ್ರಭ'ದಲ್ಲಿ ಫೆ.28ರಂದು ಪ್ರಕಟವಾದ 'ಪರ್ದಾ ಹೈ ಪರ್ದಾ' ಲೇಖನವು ಮುಸ್ಲಿಂ ಸಮಾಜದವರ ಆಕ್ರೋಶಕ್ಕೆ ಕಾರಣವಾಗಿದೆ. ಲೇಖನವನ್ನು ಪ್ರಕಟಿಸಿರುವ ಮೂಲ ಉದ್ದೇಶ ಯಾವುದೇ ಧರ್ಮದವರಿಗೆ ನೋವುಂಟು ಮಾಡುವುದು ಆಗಿರಲಿಲ್ಲ. 'ಕನ್ನಡಪ್ರಭ' ಯಾವತ್ತೂ ಕೂಡಾ ಜಾತ್ಯತೀತ ನಿಲವನ್ನು ಹೊಂದಿರುವ ಹಾಗೂ ಸರ್ವಧರ್ಮಗಳನ್ನು ಸದಾ ಅತ್ಯಂತ ಗೌರವಿಸುವ ಪತ್ರಿಕೆ. ಎಲ್ಲ ಧರ್ಮದವರಲ್ಲೂ ಹೆಣ್ಣು ಶೋಷಣೆಗೆ ಒಳಗಾದವಳು. ಶೋಷಿತರ ಧ್ವನಿಯನ್ನು ಜಾತಿ, ಧರ್ಮದ ಚೌಕಟ್ಟನ್ನು ಮೀರಿ ಪತ್ರಿಕೆಯು ಪ್ರಕಟಿಸುತ್ತಲೇ ಬಂದಿದೆ. ಅದಕ್ಕೆ ಅನುಗುಣವಾಗಿಯೇ ಈ ಲೇಖನವನ್ನು ಪ್ರಕಟಿಸಲಾಗಿತ್ತು.

ಈ ಲೇಖನವು ಪತ್ರಿಕೆಯದ್ದೇ ಸೃಷ್ಟಿಯಲ್ಲ. ಬಾಂಗ್ಲಾದೇಶದ ಲೇಖಕಿ ತಸ್ಲಿಮಾ ನಸ್ರೀನ್ ಅವರ ಲೇಖನದ ಅನುವಾದವಿದು. ದೇಶದ ಬೇರೆಬೇರೆ ಭಾಷೆಯ ಪತ್ರಿಕೆಗಳಲ್ಲಿ ಇದು ಈಗಾಗಲೆ ಪ್ರಕಟವಾಗಿದೆ. ಚರ್ಚೆಗೆ ವಸ್ತುವಾಗಿದೆ. ಬೌದ್ಧಿಕ ಚರ್ಚೆಗೆ ವಸ್ತುವಾಗಬೇಕಿದ್ದ ವಿಷಯ ಹಿಂಸೆಗೆ ಕಾರಣವಾಗಿದ್ದು ವಿಷಾದದ ಸಂಗತಿ.

ಈ ಲೇಖನದಿಂದ ಮುಸ್ಲಿಂ ಸಮಾಜದವರಿಗೆ ನೋವಾಗಿದ್ದರೆ ಅದಕ್ಕೆ ನಾವು ವಿಷಾದಿಸುತ್ತೇವೆ. ಈ ಲೇಖನವನ್ನೇ ಸಮಾಜದ ಶಾಂತಿ ಕದಡುವುದಕ್ಕೆ ಕಾರಣವನ್ನಾಗಿಸಿಕೊಳ್ಳಬಾರದು ಎಂದು ವಿನಂತಿಸುತ್ತೇವೆ. ಎಲ್ಲರೂ ಸಂಯಮದಿಂದ ಇದ್ದು ಶಾಂತಿ ಕಾಪಾಡಬೇಕೆಂದು ಮನವಿ ಮಾಡುತ್ತೇವೆ.

● ಸಂಪಾದಕ

ಶಾಂತಿ ಕಾಪಾಡಲು ಸಿಎಂ ಮನವಿ

ಕನ್ನಡಪ್ರಭ ವಾರ್ತೆ, ವಿಧಾನಸಭೆ, ಮಾ. 1

ರಾಜ್ಯದ ಎಲ್ಲಾ ಜನರು ಶಾಂತಿ ಕಾಪಾಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನವಿ ಮಾಡಿದ್ದಾರೆ.

ರಾಜ್ಯದ ಹಲವೆಡೆ ನಡೆದಿರುವ ಹಿಂಸಾಚಾರದ ಘಟನೆ ಕುರಿತು ವಿಧಾನಸಭೆಯಲ್ಲಿ ಹೇಳಿಕೆ ನೀಡಿದ ಅವರು, ಶಾಂತಿ–ಸೌಹಾರ್ದತೆಗೆ ಹೆಸರಾದ ರಾಜ್ಯದ ಜನತೆ ಸಹನೆ ಕಳೆದುಕೊಳ್ಳಬಾರದು. ಶಾಂತಿ–ಸುವ್ಯವಸ್ಥೆ ಕದಡುವ ಪ್ರಯತ್ನ ಮಾಡಬಾರದು ಎಂದು ಕೋರಿದ್ದಾರೆ.

ಪತ್ರಿಕಾ ಲೇಖನದ ಕುರಿತು ಸಾರ್ವಜನಿಕರು ಉದ್ರಿಕ್ತರಾಗದಂತೆ ಕೋರಿರುವ ಅವರು, ರಾಜ್ಯದಲ್ಲಿ ಕಾನೂನು– ಸುವ್ಯವಸ್ಥೆ ಕಾಪಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಶಾಂತಿ ಸುವ್ಯವಸ್ಥೆ ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ನೀಡುವಂತೆ ಕೋರಿದರು. ಅಲ್ಲದೆ, ಶಾಂತಿ ಕಾಪಾಡುವಂತೆ ರಾಜ್ಯದ ಜನತೆಯನ್ನು ಕೋರಿದರು.

ಕಾಂಗ್ರೆಸ್ ಶಾಸಕ ರೋಷನ್ ಬೇಗ್, ತನ್ವೀರ್ ಸೇಠ್ ಅವರು ಸಹ ಶಾಂತಿ ಕಾಪಾಡಲು ಮನವಿ ಮಾಡಿದರು. ಸಂಜೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಮೌಲ್ವಿ ರಿಯಾಜುಲ್ ರೆಹಮಾನ್ ಮತ್ತಿತರರು, ಇನ್ನು ಯಾವುದೇ ಪ್ರತಿಭಟನೆ, ಮೆರವಣಿಗೆ ನಡೆಸದಂತೆ ಮುಸ್ಲಿಂ ಸಮಾಜಕ್ಕೆ ಮನವಿ ಮಾಡಿದರು.

ಪ್ರಮುಖ ಸುದ್ದಿ

ಅಕ್ರಮ–ಸಕ್ರಮಕ್ಕೆ ಕಾಲ ಸನ್ನಿಹಿತ

● ವಿಧಾನಸಭೆಯಲ್ಲಿ ವಿಧೇಯಕ ಮಂಡನೆ

ವಿಧಾನಸಭೆ: ಕಡೆಗೂ ಸಕ್ರಮ ಯೋಜನೆ ಜಾರಿಯಾಗುವ ದಿನ ಸಮೀಪಿಸಿದೆ. ವಿಧಾನಸಭೆಯಲ್ಲಿ ಸೋಮವಾರ ಸಕ್ರಮ ಯೋಜನೆಗೆ ಜೀವ ನೀಡುವ ಕರ್ನಾಟಕ ಪಟ್ಟಣ ಹಾಗೂ ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ ವಿಧೇಯಕ ಸೋಮವಾರ ಮಂಡನೆಯಾಯಿತು. ➤ ವಿವರ ಪುಟ 5

ಶಾಸಕ ವೈ.ಸಂಪಂಗಿಗೆ ಸದನ ಕ್ಲೀನ್‌ಚಿಟ್

● ಲೋಕಾಯುಕ್ತ ತನಿಖೆ ಬಾಕಿ

ಕನ್ನಡಪ್ರಭ ವಾರ್ತೆ, ವಿಧಾನಸಭೆ, ಮಾ.1
ಲಂಚ ಪ್ರಕರಣದಲ್ಲಿ ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದಿದ್ದ ಬಿಜೆಪಿಯ ಕೆಜಿಎಫ್ ಶಾಸಕ ವೈ.ಸಂಪಂಗಿ ಅವರಿಗೆ ವಿಧಾನಸಭೆ ವಿಶೇಷ ಸದನ ಸಮಿತಿ ನಿರೀಕ್ಷೆಯಂತೆ ಕ್ಲೀನ್‌ಚಿಟ್ ನೀಡಿದೆ.



● ಶಾಸಕರ ಭವನದಲ್ಲಿ 5 ಲಕ್ಷ ಲಂಚ ಸ್ವೀಕಾರ ಕೇಸ್

● ಆರೋಪ ಹೊರಿಸಿದ್ದ ಫಾರೂಕ್‌ಗೇ ಛೀಮಾರಿ

ಇದೇ ವೇಳೆ ಸಂಪಂಗಿ ವಿರುದ್ಧ ಆರೋಪ ಹೊರಿಸಿದ್ದ ಹುಸೇನ್ ಮುಹೀರ್ ಫಾರೂಕ್ ಅವರಿಗೆ ಛೀಮಾರಿ ಅಥವಾ ವಾಗ್ದಂಡನೆಯ ಶಿಕ್ಷೆ ಗೊಳಪಡಿಸಲು ಸದನ ಸಮಿತಿ ಶಿಫಾರಸು ಮಾಡಿ ಪ್ರಕರಣವನ್ನೂ ಮುಕ್ತಾಯಗೊಳಿಸಿದೆ.

ಸದನ ಸಮಿತಿ ರಚನೆಯಾಗಿದ್ದು ಕೇವಲ ಸಂಪಂಗಿ ಅವರು ವಿಧಾನಸಭೆ ಸದಸ್ಯರಾಗಿದ್ದಾರೆ ಎಂಬ ಕಾರಣಕ್ಕಾಗಿ ಮಾತ್ರ. ಹೀಗಾಗಿ ಈ ಸಮಿತಿ ವಿಧಾನಸಭೆಯ ಸದಸ್ಯತ್ವದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ಲೋಕಾಯುಕ್ತರು ಹೂಡಿದ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಿರಾತಂಕವಾಗಿ ಮುಂದುವರಿಯಲಿದೆ. ಈ ಸಮಿತಿ ಶಿಫಾರಸಿಗೂ, ಲೋಕಾಯುಕ್ತರ ವಿಚಾರಣೆಗೂ ಸಂಬಂಧವಿಲ್ಲ. ಸೋಮವಾರ ವಿಧಾನಸಭೆಯಲ್ಲಿ ಮಂಡಿಸಲಾದ ಈ ವಿಶೇಷ ಸದನ ಸಮಿತಿ ವರದಿ ಪ್ರಕಾರ, ಹುಸೇನ್ ಮುಹೀರ್ ಫಾರೂಕ್, ಶಾಸಕ ಸಂಪಂಗಿ ವಿರುದ್ಧ ತಪ್ಪು ಆರೋಪ ಹೊರಿಸಿ ಅವರ ವ್ಯಕ್ತಿತ್ವಕ್ಕೆ ಕುಂದು ತಂದಿದ್ದಾರೆ. ➤ 5 ನೇ ಪುಟಕ್ಕೆ

ಒತ್ತಡಕ್ಕೆ ಮಣಿಯಲ್ಲ, ತೈಲ ಬೆಲೆ ವಾಪಸಿಲ್ಲ

● ಮಿತ್ರರಿಗೇ ಪ್ರಧಾನಿ ತಿರುಗೇಟು

ನವದೆಹಲಿ: ಮುಂಗಡ ಪತ್ರದಲ್ಲಿ ಪ್ರಸ್ತಾಪಿಸಿದಂತೆ ತೈಲೋತ್ಪನ್ನಗಳ ಬೆಲೆ ಏರಿಕೆ ಇಳಿಸುವ ಪ್ರಸ್ತಾಪವೇ ಇಲ್ಲ ಎಂದು ಪ್ರಧಾನಿ ಮನಮೋಹನ್‌ಸಿಂಗ್ ಸ್ಪಷ್ಟಪಡಿಸಿದ್ದಾರೆ. ಡಿಎಂಕೆ ಮತ್ತು ಟಿಎಂಸಿ ಈ ನಿಟ್ಟಿನಲ್ಲಿ ಹೇರುತ್ತಿರುವ ಒತ್ತಡಕ್ಕೆ ಕೇಂದ್ರ ಮಣಿಯದು ಎಂದಿದ್ದಾರೆ ಪ್ರಧಾನಿ.

● ಜನಮೆಚ್ಚುಗೆ ಕಾರ್ಯದಿಂದ ಹಣದುಬ್ಬರ ನಿಯಂತ್ರಣ ಅಸಾಧ್ಯ

● ಕಠಿಣ ನಿರ್ಧಾರ ಅಗತ್ಯ: ಸಿಂಗ್

ಸೌದಿ ಅರೇಬಿಯಾ ಪ್ರವಾಸದಿಂದ ಸ್ವದೇಶಕ್ಕೆ ಹಿಂತಿರುಗುವ ವೇಳೆ ವಿಶೇಷ ವಿಮಾನದಲ್ಲಿ ಅವರು ತೈಲೋತ್ಪನ್ನಗಳ ಬೆಲೆ ಯೇರಿಕೆ ಬಗ್ಗೆ ಕೇಂದ್ರದ ನಿಲವು ಸ್ಪಷ್ಟಪಡಿಸಿದರು.

ಬೆಲೆಯೇರಿಕೆ ಜನರಿಗೆ ತೊಂದರೆ ಉಂಟು ಮಾಡಿದರೂ, ಆರ್ಥಿಕ ಬೆಳವಣಿಗೆಯ ದೀರ್ಘಾಲೋಚನೆ ಹಿನ್ನೆಲೆಯಲ್ಲಿ ಈ ಕ್ರಮ ಅನಿವಾರ್ಯ ಎಂದು ಸಿಂಗ್ ವಿವರಣೆ ನೀಡಿದರು.

'ಜನಮೆಚ್ಚುಗೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಹಣದುಬ್ಬರದಿಂದ ಜನರನ್ನು ಕಾಪಾಡಲು ಸಾಧ್ಯವಿಲ್ಲ. ಇದರಿಂದಾಗಿ ಈಗಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿ ಎದುರಿಸಬೇಕಾಗಬಹುದು. ಇದರಿಂದಾಗಿ ಬಂಡವಾಳ ಹೂಡಿಕೆ ವಾತಾವರಣಕ್ಕೆ ಕಷ್ಟವಾಗಬಹುದು' ಎಂದರು.

ಇಂತಹ ಜನಮೆಚ್ಚುಗೆಯ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ಉದ್ಯೋಗ ಸೃಷ್ಟಿಗೆ ಕೂಡ ಅಡ್ಡಿಯಾಗಬಹುದೆಂದು ಪ್ರಧಾನಿ ಎಚ್ಚರಿಕೆಯಿತ್ತರು.

ಪೊಲೀಸ್ ಠಾಣೆಯಲ್ಲಿ ನಿಮ್ಮ ದೂರಿಗೆ ಗಮನ ನೀಡಿಲ್ಲವೆ?



ರಾಜ್ಯದ ಯಾವುದೇ ಪೊಲೀಸ್ ಠಾಣೆಯಲ್ಲಿ ನಿಮ್ಮ ದೂರುಗಳಿಗೆ ತಕ್ಷಣ ಸೂಕ್ತ ಗಮನ ನೀಡದಿದ್ದರೆ ನೀವು ಶೀಘ್ರ ಪರಿಹಾರಕ್ಕಾಗಿ -

- ಪ್ರತಿ ಪೊಲೀಸ್ ಠಾಣೆಯ ಹೊರಗಡೆ ವಿಶೇಷವಾಗಿ ಪ್ರದರ್ಶಿಸಿರುವ ಬೋರ್ಡ್‌ನಲ್ಲಿ ನಮೂದಿಸಿರುವ ದೂರವಾಣಿ ಸಂಖ್ಯೆಗಳಲ್ಲಿನ ಯಾವುದೇ ದೂರವಾಣಿ ಸಂಖ್ಯೆಗೆ ಕರೆ ಮಾಡಿ ನಿಮ್ಮ ಅಹವಾಲುಗಳನ್ನು ಹೇಳಿಕೊಳ್ಳಬಹುದು.
- ಈ ದೂರವಾಣಿ ಸಂಖ್ಯೆಗಳು ಸಂಬಂಧಿಸಿದ ಪೊಲೀಸ್ ಠಾಣೆಯ ಉಸ್ತುವಾರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್/ಪೊಲೀಸ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿವೈಎಸ್‌ಪಿ) ಅವರ ದೂರವಾಣಿ ಸಂಖ್ಯೆಗಳಾಗಿರುತ್ತವೆ.
- ನೀವು ಬೆಂಗಳೂರಿನಲ್ಲಿರುವ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು (ಡಿಜಿ - ಐಜಿಪಿ) ರವರ ಕಛೇರಿಯಲ್ಲಿರುವ ದೂರವಾಣಿ ಸಂಖ್ಯೆ 1800 425 0100 ಗೆ ಕೂಡ ಉಚಿತ ಕರೆ ಮಾಡಿ ತಮ್ಮ ದೂರು ನೀಡಬಹುದು.

ನಾಗರೀಕರು ಮಾದಲು

ಇದು ಕರ್ನಾಟಕ ಪೊಲೀಸ್‌ರ ಜನಪರ ಕಾರ್ಯಕ್ರಮ
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರಿಂದ ಪ್ರಕಟಿತ
ಕರ್ನಾಟಕ ವಾರ್ತೆ
ಕರ್ನಾಟಕ ರಾಜ್ಯ ಪೊಲೀಸ್

ಪಂಚ್ ಮುಖಿ

▮ ಎಸ್.ವಿ. ಪದ್ಮನಾಭ

ಹಿಂದೆ ಮುತ್ತುರತ್ನಗಳನ್ನು ಮಾರುತ್ತಿದ್ದ ಜಾಗಕ್ಕೆ ಈಗ ರತ್ನಗಳಷ್ಟೇ ಬೆಲೆ ಬಂದಿದೆ..!!

▮ ಪರೀಕ್ಷೆ ಹಿನ್ನೆಲೆಯಲ್ಲಿ 1000 ಮೆ.ವ್ಯಾ. ವಿದ್ಯುತ್ ಖರೀದಿಸಲಿದೆ ರಾಜ್ಯ

ಜನತೆಗಿನ್ನು ತುಸು ನೆಮ್ಮದಿ

ಬೆಂಗಳೂರು, ಮಾ.1
ರಾಜ್ಯದಲ್ಲಿರುವ ವಿದ್ಯುತ್ ಸಮಸ್ಯೆಗೆ ಪರಿಹಾರವಾಗಿ ಸರ್ಕಾರ ಸೋಮವಾರದಿಂದ ಒಂದು ಸಾವಿರ ಮೆಗಾ ವ್ಯಾಟ್ ವಿದ್ಯುತ್ ಖರೀದಿಸಲಿದೆ.

ರಾಜ್ಯದಲ್ಲಿ ಕೈಗಾರಿಕೆಗಳಿಗೆ, ವಿದ್ಯಾರ್ಥಿಗಳ ಪರೀಕ್ಷೆ ಸಮಯದಲ್ಲಿ ತೊಂದರೆ ತಪ್ಪಿಸಲು ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ಸರ್ಕಾರ ಹೆಚ್ಚುವರಿಯಾಗಿ ಒಂದು ಸಾವಿರ ಮೆಗಾ ವ್ಯಾಟ್ ವಿದ್ಯುತ್ ಖರೀದಿಸಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರವಾಗಿ ಜಲಸಂಪನ್ಮೂಲ ಸಚಿವ ಎಸ್.ಆರ್.ಬೊಮ್ಮಾಯಿ ಈ ವಿಷಯ ತಿಳಿಸಿದರು.



● ಕೈಗಾರಿಕೆ, ರೈತರ ಪಂಪ್ ಸೆಟ್‌ಗೆ ವಿದ್ಯುತ್ ನೀಡಲು ಖರೀದಿ ನಿರ್ಧಾರ

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನಗರದಲ್ಲಿ ರೈತರ ವಿದ್ಯುತ್ ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಿಸಿ ಕಾವೇರಿ ಭವನದ ಕೆಪಿಟಿಸಿಎಲ್ ಕಚೇರಿ ಎದುರು ಧರಣಿ ನಡೆಸಿತು. ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ಸಚಿವರು ರೈತರನ್ನು ಉದ್ದೇಶಿಸಿ ಮಾತನಾಡಿದರು.

ಕೇವಲ ವಿದ್ಯುತ್ ಖರೀದಿಯಷ್ಟೇ ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಆರು ಗಂಟೆಗಳ ನಿರಂತರ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುವುದು. ಈಗಾಗಲೇ ಆರು ಗಂಟೆಗಳ ಕಾಲ ಮೂರು ಫೇಸ್ ವಿದ್ಯುತ್ ಪೂರೈಕೆ ಮಾಡುತ್ತಿದ್ದು, ಹೆಚ್ಚುವರಿಯಾಗಿ ಒಂದೂವರೆ ಗಂಟೆ ಪೂರೈಕೆ ಮಾಡಲಾಗುತ್ತದೆ ಎಂದು ರೈತರಿಗೆ ಭರವಸೆ ನೀಡಿದರು. ➤ 9 ನೇ ಪುಟಕ್ಕೆ